ಅಸಲು ದಾವೆ ನಂಃ 66/2018

ಪಿ.ಡಬ್ಲ್ಯೂಃ1– ಹನಮಂತಪ್ಪ ತಳವಾರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 15/04/2025 ರಂದು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ– ಪ್ರತಿವಾದಿ ಶ್ರೀ ವಿ.ಡಿ.ಪಿ. ವಕೀಲರಿಂದಃ–**

ನಾನು 1969 ನೇ ಇಸ್ವೀಯಲ್ಲಿ ಹುಟ್ಟಿರುವುದಿಲ್ಲ ಎಂದರೆ ನಾನು 1980 ರಲ್ಲಿ ಜನಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು 1980 ರಲ್ಲಿ ಜನಿಸಿರುವುದ್ದರಿಂದ ಓ ಎಸ್ ನಂ.91/1969 ರ ಮಾಹಿತಿ ನನಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ಓ.ಎಸ್.91/1969 ರ ದಾವೆಯು ಯಾರ ಯಾರ ನಡುವೆ ಮತ್ತು ಯಾವ ಉದ್ದೇಶಕ್ಕಾಗಿ ದಾಖಲಿಸಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ದತ್ತಕ ತಾಯಿಯಾದ ರಂಗವ್ವ ಕೋಂ ಯಲ್ಲಪ್ಪ ತಳವಾರರವರು ಸದರಿ ದಾವೆಯನ್ನು ರಂಗಪ್ಪನ ವಿರುದ್ಧ ದಾಖಲಿಸಿರುತ್ತಾರೆ. ಸದರಿ ದಾವೆಯನ್ನು ನನ್ನ ತಾಯಿಯವರು ರಂಗಪ್ಪನ ವಿರುದ್ಧ ಮಾತ್ರ ದಾವೆಯನ್ನು ದಾಖಲು ಮಾಡಿದ್ದು, ಬೇರೆಯರ ವಿರುದ್ಧ ದಾವೆಯನ್ನು ದಾಖಲು ಮಾತಿರುವುದಿಲ್ಲ. ರಂಗವ್ವ ಕೋಂ ಯಲ್ಲಪ್ಪ ತಳವಾರ ಉರ್ಫ ಗಾಜಿಯವರು ನನ್ನ ದತ್ತಕ ಅಲ್ಲ ಅಂದರೆ ಸರಿಯಲ್ಲ. ದಾವ ಸಂಖ್ಯೆಃ 91/1969 ನ್ನು ನನ್ನ ದೊಡ್ಡಪ್ಪನಯರಿಗೆ ಆಸ್ತಿಯನ್ನು ನೀಡದಿರುವುದ್ದರಿಂದ ನನ್ನ ತಾಯಿಯವರು ಸದರಿ ದಾವೆಯನ್ನು ದಾಖಲು ಮಾಡಿರುತ್ತಾರೆ. ಸದರಿ ಉದ್ದೇಶಕ್ಕಾಗಿ ದಾವೆಯನ್ನು ದಾಖಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲದ್ದರಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ 159/3 ನ್ನು ಪ್ರಸುತ್ತ ದಾವೆಯಲ್ಲಿ ಸೇರಿಸಿರುತ್ತೇವೆ. ಅಸಲು ದಾವಾ ಸಂಖ್ಯೆಃ 91/1969 ರಲ್ಲಿ ಸರ್ವೆ ನಂ 159/3 ನ್ನು ನನ್ನ ತಾಯಿಯವರು ಸೇರಿಸಿರುತ್ತಾರೆ. ಸರ್ವೆ ನಂ 159/3 ಮತ್ತು 159/1 ನ್ನು ದಾವಾ ಸಂಖ್ಯೆಃ 91/1969 ರಲ್ಲಿ ಸೇರಿಸಿರುತ್ತೇವೆ . ಈ ಪ್ರಸುತ್ತ ದಾವೆಯಲ್ಲಿರುವ ಪ್ರತಿವಾದಿ ನಂ.1, 2, 4, 5,7, 8 ಮತ್ತು 9 ರವರ ನಡುವೆ ದಾವಾ ಸಂಖ್ಯೆಃ 27/2015 ಹಿರಿಯ ದಿವಾಣಿ ನ್ಯಾಯಾಲಯ ರೋಣದಲ್ಲಿ ದಾವಾ ದಾಖಲು ಆಗಿತ್ತು ಎಂದರೆ ಸರಿಯಲ್ಲ. ದಾವಾ ಸಂಖ್ಯೆಃ 27/2015 ರಲ್ಲಿ ಮೇಲೆ ಹೇಳಿದ ಪ್ರತಿವಾದಿಗಳು ರಾಜಿಯಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರಾಜಿಯ ಬಗ್ಗೆ

ಅಸಲು ದಾವೆ ನಂಃ 66/2018

ಪಿ.ಡಬ್ಲ್ಯೂಃ1- ಹನಮಂತಪ್ಪ ತಳವಾರ

ನನಗ ಮಾಹಿತಿ ಇದ್ದರೂ ಸಹ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸುತ್ತ ದಾವೆಯಲ್ಲಿರುವ ಪ್ರತಿವಾದಿಗಳು ರಂಗವ್ವ ಕೋಂ ಯಲ್ಲಪ್ಪ ತಳವಾರ ಉರ್ಫ ಗಾಜಿ ರವರ ವಾರುಸದಾರರು ಆಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೇ ವಾರಸುದಾರರು ಆಗಿರುತ್ತೇವೆ ಎಂದು ನುಡಿಯುತ್ತಾರೆ. ರಂಗವ್ವ ಕೋಂ ಯಲ್ಲಪ್ಪ ತಳವಾರ ಉರ್ಫ ಗಾಜಿಯವರ ಆಸ್ತಿಯನ್ನು ಕಬಳಿಸುವುದ್ದಕ್ಕಾಗಿ ನಾನೇ ದತ್ತಕ ಮಗ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸಂಖ್ಯೆ 91/1969 ರ ತೀರ್ಪು ಪ್ರತಿವಾದಿಯರಿಗೆ ಬಧನಕಾರಿ ಆಗುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ-ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್)**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.